**(ಇಂದು ದಿನಾಂಕಃ 03–04–2025 ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)**

ಮುಖ್ಯ ವಿಚಾರಣೆ **6** ನೇ ಪ್ರತಿವಾದಿ ಪರ ಃ ಶ್ರೀ ಎಂ ಟಿ ಹೆಚ್ ವಕೀಲರಿಂದ ಃ-

ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದ ವಿಷಯ ನಾನೇ ಹೇಳಿ ಬರೆಸಿದ್ದು ಅದು ಸತ್ಯವಾಗಿರುತ್ತದೆ.

ಮಧ್ಯಂತರ ಅರ್ಜಿ 4 ರ ಆದೇಶದ ಮೇರೆಗೆ ನಾನು ಸಲ್ಲಿಸಿರುವ ದಾಖಲೆಗಳನ್ನು ಈಗ ನೋಡಿ ಗುರುತಿಸಿದ್ದು ಅದನ್ನು ಕ್ರಮವಾಗಿ ಈ ಕೆಳಗಿನಂತೆ ಗುರುತಿಸಲಾಗಿದೆ.

| | |
|---|---|
| 1) | ಅಸಲು ದಾವಾ ಸಂಖ್ಯೆ 314/2012 ದಿಃ 04-09-2018 ರ ಅಂತಿಮ ಆದೇಶದ ದೃಡಿಕೃತ ಪ್ರತಿಯನ್ನು ನಿ.ಡಿ.1 ಎಂದು ಗುರುತಿಸಲಾಯಿತು. |
| 2) | ಅಸಲು ದಾವಾ ಸಂಖ್ಯೆ 314/2012 ರಲ್ಲಿನ ಡಿಕ್ರಿಯ ದೃಡಿಕೃತ ಪ್ರತಿಯನ್ನು ನಿ.ಡಿ.2 ಎಂದು ಗುರುತಿಸಲಾಯಿತು. |
| 3) | ಆರ್.ಎ.ಸಂಖ್ಯೆ 24/2018 ಹಿರಿಯ ದಿವಾಣಿ ನ್ಯಾಯಾಲಯ ನವಲಗುಂದ ಡಿಕ್ರಿಯ ದೃಡಿಕೃತ ಪ್ರತಿಯನ್ನು ನಿ.ಡಿ.3 ಎಂದು ಗುರುತಿಸಲಾಯಿತು. |
| 4) | ಅಸಲು ದಾವಾ ಸಂಖ್ಯೆ 550/2014 ಹಿರಿಯ ದಿವಾಣಿ ನ್ಯಾಯಾಲಯ ಧಾರವಾಡ ರವರ ರೋಜನಾಮೆಯ ದೃಡಿಕೃತ ಪ್ರತಿಯನ್ನು ನಿ.ಡಿ.4 ಎಂದು ಗುರುತಿಸಲಾಯಿತು. |
| 5) | ದರಖಾಸ್ತ ಪ್ರಕರಣ ಸಂಖ್ಯೆ 03/2021 ರ ರೋಜನಾಮೆಯ ದೃಡಿಕೃತ ಪ್ರತಿಯನ್ನು ನಿ.ಡಿ.5 ಎಂದು ಗುರುತಿಸಲಾಯಿತು. |
| 6) | ದರಖಾಸ್ತ ಪ್ರಕರಣ ಸಂಖ್ಯೆ 03/2021 ರಲ್ಲಿ ದಿಃ 21-03-2024 ರಂದು ಸಲ್ಲಿಸಿದ ಮೇಮೊದ ದೃಡಿಕೃತ ಪ್ರತಿಯನ್ನು ನಿ.ಡಿ.6 ಎಂದು ಗುರುತಿಸಲಾಯಿತು. |
| 7) | ನಾವಳ್ಳಿ, ಅಣ್ಣಿಗೇರಿ, ಅಣ್ಣಿಗೇರಿಗೆ ಸೇರಿದ ಸರ್ವೆ ಸಂಖ್ಯೆ 61 ಹಿಸ್ಸಾ 2 ಬಿ/1 ರ ಪಹನಿ ಪತ್ರಿಕೆಯನ್ನು ನಿ.ಡಿ.7 ಎಂದು ಗುರುತಿಸಲಾಯಿತು. |
| 8) | ಎಂ ಆರ್ ಸಂಖ್ಯೆ ಟಿ-2 ರ ಗಣಕೀಕೃತ ದೃಡಿಕೃತ ಪ್ರತಿಯನ್ನು ನಿ.ಡಿ.8 ಎಂದು ಗುರುತಿಸಲಾಯಿತು. |

ಆದಕಾರಣ ದಾವೆಯನ್ನು ವಜಾಗೊಳಿಸಬೇಕಾಗಿ ವಿನಂತಿ.

ಪಾಟೀಸವಾಲು ಃ ಶ್ರೀ ಹೆಚ್ ಎಂ ಎನ್ ವಕೀಲರಿಂದ ಃ

ಪಾಟೀಸವಾಲಿಗೆ ಸಮಯವಕಾಶ ಕೋರಿದ್ದು, ಅಂತಿಮ ಸಮಯವಕಾಶ ನೀಡಲಾಯಿತು.

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)*

**ಓ. ಹೇ. ಕೇ. ಸರಿ. ಇದೆ.**

(ನವೀನ ಎಫ್. ಡಿಸೋಜಾ)

**ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.**

**ನವಲಗುಂದ.**